UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Friday
18-09-2026



ನಗರದ ಜಿಕೆವಿಕೆಯಲ್ಲಿ ನಿರ್ಮಿಸಿರುವ ಬೆಂಗಳೂರು ಕೃಷಿ ವಿವಿಯ ವಿಸ್ತರಣಾ ನಿರ್ದೇಶನಾಲಯದ ನೂತನ ಕಟ್ಟಡವನ್ನು ಕೃಷಿ ಸಚಿವ ಪಿ.ಎಂ. ನರೇಂದ್ರಸ್ವಾಮಿ ಗುರುವಾರ ಲೋಕಾರ್ಪಣೆ ಮಾಡಿದರು. ಕುಲಪತಿ ಡಾ. ಎಸ್.ವಿ. ಸುರೇಶ್, ಕುಲಸಚಿವ ಡಾ. ವೈ.ಎನ್. ಶಿವಲಿಂಗಯ್ಯ, ಸಂಶೋಧನಾ ನಿರ್ದೇಶಕ ಡಾ. ಮೂಡಲಗಿರಿಯಪ್ಪ, ಡಾ. ಕೆ.ಪಿ. ರಘುಪ್ರಸಾದ್ ಇತರರು ಹಾಜರಿದ್ದರು.

ವಿಜಯವಾಣಿ ಚಿತ್ರ

Vijayavani pg 05

ರೈತರ ಯಶೋಗಾಥೆಗಳು ಹೆಚ್ಚಿಚ್ಚು ಪ್ರಕಟವಾಗಲಿ

ಕೃಷಿ ಸಚಿವ ನರೇಂದ್ರಸ್ವಾಮಿ ಸಲಹೆ | ವಿಜಯವಾಣಿ ರೈತಮಿತ್ರ ಪ್ರಶ್ನೋತ್ತರ ಅಂಕಣದ 5ನೇ ವಾರ್ಷಿಕೋತ್ಸವ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸಂಕಷ್ಟದಲ್ಲಿರುವ ಅನ್ನದಾತರಿಗೆ ಪರಿಹಾರದ ಜತೆಗೆ ಆತ್ಮಸ್ಥೈರ್ಯವನ್ನೂ ನೀಡುತ್ತಿರುವ **ವಿಜಯವಾಣಿ**ಯ 'ರೈತಮಿತ್ರ' ಅಂಕಣ ಜ್ಞಾನಮಿತ್ರನಾಗಿ ಮಾರ್ಪಟ್ಟಿದೆ. ಈ ಯಶಸ್ಸಿನ ಜತೆಗೆ ಮುಂದಿನ ದಿನಗಳಲ್ಲಿ ಯಶಸ್ವಿ ರೈತರ ಯಶೋಗಾಥೆಯನ್ನು ಹೆಚ್ಚಿಚ್ಚು ಪ್ರಕಟಿಸುವ ಮೂಲಕ ಕೃಷಿಕರಿಗೆ ತಂತ್ರಜ್ಞಾನದ ಮಾಹಿತಿ ತಲುಪಿಸಬೇಕು ಎಂದು ಕೃಷಿ ಸಚಿವ ನರೇಂದ್ರಸ್ವಾಮಿ ಹೇಳಿದ್ದಾರೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕ್ಯಾಂಪಸ್ ಜಿಕೆವಿಕೆಯಲ್ಲಿ ಗುರುವಾರ ಆಯೋಜಿಸಿದ್ದ **ವಿಜಯವಾಣಿ**ಯ 'ರೈತಮಿತ್ರ' ಪ್ರಶ್ನೋತ್ತರ ಅಂಕಣದ 5ನೇ ವಾರ್ಷಿಕೋತ್ಸವ ಹಾಗೂ ಮಣ್ಣಿನ ವಿಸ್ಮಯಕಾರಿ ಕೀಟಗಳ ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

■ ಬೆಂಗಳೂರು ಕೃಷಿ ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ಆಯೋಜನೆ

ಪ್ರಸ್ತುತ ಡಿಜಿಟಲ್ ಮಾಧ್ಯಮದ ಭರಾಟೆ ಹೆಚ್ಚಾಗಿದೆ. ಈ ಮಧ್ಯೆ ರೈತಮಿತ್ರ ಅಂಕಣದ ಜನಪ್ರಿಯತೆ ಮುದ್ರಣ ಮಾಧ್ಯಮದ ವಿಶ್ವಾಸಾರ್ಹತೆಗೆ ಹಿಡಿದ ಕೈಗನ್ನಡಿಯಾಗಿದೆ. ಕೃಷಿ ವಿವಿಯ ಜ್ಞಾನ ಹಾಗೂ ಅದನ್ನು ಲಕ್ಷಾಂತರ ಜನರಿಗೆ ತಲುಪಿಸುವ ಮಾಧ್ಯಮ ಶಕ್ತಿ ಎರಡೂ ಸೇರಿದರೆ ಅದರ ನೇರ ಪ್ರಯೋಜನ ರೈತರಿಗೆ ದೊರೆಯುತ್ತದೆ ಎಂಬುದನ್ನು ಈ ಅಂಕಣ ಸಾಬೀತುಪಡಿಸಿದೆ. ರೈತರಿಗೆ ಮಾಹಿತಿ ನೀಡಲಷ್ಟೇ ಅಲ್ಲದೆ ಸಮಸ್ಯೆಯನ್ನು ಕೇಳಲು ಯಾರೋ ಒಬ್ಬರು ಇದ್ದಾರೆಂಬ ಭರವಸೆ ಸಿಕ್ಕಿದ್ದು, ಪತ್ರಿಕೆಯ ಕಾರ್ಯ ಮೆಚ್ಚುವಂಥದ್ದು ಎಂದರು.

ವಿವಿ, ರೈತರ ಮಧ್ಯೆ ಸೇತುವೆಯಾದ ಅಂಕಣ: ಆರಂಭದ ದಿನಗಳಲ್ಲಿ ಅಂಕಣವು 2 ದಿನಗಳಿಗೊಮ್ಮೆ ಪ್ರಕಟವಾಗುತ್ತಿತ್ತು. ರೈತರು ಕೇಳುವ ಪ್ರಶ್ನೆಗಳಿಗೆ ಕೃಷಿ ವಿಜ್ಞಾನಿಗಳಿಂದ ನಿಖರ ಉತ್ತರ ಕೊಡಿಸುವ ಜತೆಗೆ ವೈಜ್ಞಾನಿಕ ಮಾಹಿತಿಯನ್ನು ಸುಲಭ ಹಾಗೂ ಅರ್ಥವಾಗುವ ರೀತಿಯಲ್ಲಿ ರೈತರಿಗೆ ತಲುಪಿಸುವ ವ್ಯವಸ್ಥೆ ದಿನದಿಂದ ದಿನಕ್ಕೆ ಜನಪ್ರಿಯಗೊಂಡು ರೈತರು ಮತ್ತು ಕೃಷಿ ವಿಜ್ಞಾನಿಗಳ ನಡುವೆ ಸೇತುವೆಯಾಗಿ ಮಾರ್ಪಟ್ಟಿದೆ ಎಂದು ಸಚಿವರು ತಿಳಿಸಿದರು.

ರಾಜ್ಯದ ಎಂಟು ಲಕ್ಷಕ್ಕೂ ಹೆಚ್ಚು ರೈತರನ್ನು ತಲುಪುತ್ತಿರುವ ಅಂಕಣ ಯಶಸ್ವಿಯಾಗಿರುವುದಕ್ಕೆ ಕೃಷಿಕನ ಮಗನಾಗಿ ನಾನು **ವಿಜಯವಾಣಿ** ಪತ್ರಿಕೆಗೆ ಆಭಾರಿಯಾಗಿರುವೆ ಎಂದು ನರೇಂದ್ರಸ್ವಾಮಿ ಮೆಚ್ಚುಗೆಯ ಮಾತುಗಳನ್ನಾಡಿದರು.

ಇದೇ ವೇಳೆ ರೈತರಿಗೆ ಡಿಜಿಟಲ್ ತಂತ್ರಜ್ಞಾನ ಆಧರಿಸಿ ರೂಪಿಸಿರುವ ವ್ಯಾಟ್ಸ್‌ಆಪ್ ಚಾಟ್ ಬಾಟ್ ಸೌಲಭ್ಯಕ್ಕೆ ಸಚಿವರು ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್, ಸಂಶೋಧನಾ ನಿರ್ದೇಶಕ ಡಾ. ಮೂಡಲಗಿರಿಯಪ್ಪ, ವಿಸ್ತರಣಾ ನಿರ್ದೇಶಕ ಡಾ. ಕೆ.ಪಿ. ರಘುಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.



'ವಿಜಯವಾಣಿ'ಯಲ್ಲಿ ಪ್ರಕಟವಾದ 'ರೈತಮಿತ್ರ' ಅಂಕಣದ ಪ್ರಶ್ನೋತ್ತರಗಳ ಸಂಗ್ರಹ ಕೃತಿಯನ್ನು ಜಿಕೆವಿಕೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಚಿವ ನರೇಂದ್ರಸ್ವಾಮಿ ಬಿಡುಗಡೆ ಮಾಡಿದರು. ಕುಲಪತಿ ಡಾ. ಎಸ್.ವಿ. ಸುರೇಶ್, ಸಂಪಾದಕ ಕೆ.ಎನ್. ಚನ್ನೇಗೌಡ, ಡಾ. ಕೆ.ಪಿ. ರಘುಪ್ರಸಾದ್, ಡಾ. ಮೂಡಲಗಿರಿಯಪ್ಪ ಇದ್ದರು.

ವಿಜಯವಾಣಿ ಚಿತ್ರಗಳು

> ಕೃಷಿ ವಿವಿ, ಕೃಷಿ ಇಲಾಖೆ ಹಾಗೂ ಇತರ ಅಭಿವೃದ್ಧಿ ಇಲಾಖೆಗಳು ನಿರಂತರವಾಗಿ ಸಂಶೋಧನೆಗಳನ್ನು ಕೈಗೊಳ್ಳುತ್ತಿವೆ. ಈ ಪ್ರಯತ್ನಕ್ಕೆ ಜನಪ್ರಿಯ ಮಾಧ್ಯಮಗಳು ಕೈಜೋಡಿಸಿದಾಗ ಸಂಶೋಧನೆಯ ಫಲ ಹಾಗೂ ತಾಂತ್ರಿಕ ಜ್ಞಾನವನ್ನು ನೇರವಾಗಿ ರೈತರ ಮನೆ ಬಾಗಿಲಿಗೆ ತಲುಪಿಸಲು ಸಾಧ್ಯ. ಈ ನಿಟ್ಟಿನಲ್ಲಿ ವಿಜಯವಾಣಿಯ ಕಾರ್ಯ ಶ್ಲಾಘನೀಯ.
> | ಪಿ.ಎಂ. ನರೇಂದ್ರಸ್ವಾಮಿ ಕೃಷಿ ಸಚಿವ

ಸಾಮಾಜಿಕ ಕಳಕಳಿಯ ಸಂಕೇತ

ವಿಜಯವಾಣಿ ಪತ್ರಿಕೆಯು ಸುದ್ದಿ ತಲುಪಿಸುವುದಕ್ಕೆ ಮಾತ್ರ ಸೀಮಿತವಾಗದೆ ಸಾಮಾಜಿಕ ಕಳಕಳಿಯನ್ನೂ ಪ್ರದರ್ಶಿಸುತ್ತಿದೆ. ಡಾ. ವಿಜಯ ಸಂಕೇಶ್ವರ ಹಾಗೂ ಡಾ. ಆನಂದ ಸಂಕೇಶ್ವರ ಅವರು ಕೃಷಿಕರ ಸಮಸ್ಯೆಗಳಿಗೆ ಸ್ಪಂದಿಸುವಂತಹ ವಿಶೇಷ ಅಂಕಣವನ್ನು ತಪ್ಪದೆ ಪ್ರಕಟಿಸುತ್ತಿರುವುದು ಅಭಿನಂದನೀಯ ಎಂದು ಸಚಿವ ನರೇಂದ್ರ ಸ್ವಾಮಿ ಮೆಚ್ಚುಗೆ ವ್ಯಕ್ತಪಡಿಸಿದರು.

> ಬರ ಹಿನ್ನೆಲೆಯಲ್ಲಿ ನೀರನ್ನು ಕಡಿಮೆ ಪ್ರಮಾಣದಲ್ಲಿ ಬಳಕೆ ಮಾಡಿ ಆಹಾರ ಉತ್ಪಾದಿಸುವತ್ತ ದೃಷ್ಟಿ ಹರಿಸಬೇಕಿದೆ. ಎಐ ಸಹಿತ ತಂತ್ರಜ್ಞಾನ ಎಷ್ಟೇ ಮುಂದುವರಿದರೂ ಸಾಂಪ್ರದಾಯಿಕ ಕೃಷಿ ಪದ್ಧತಿಗಳನ್ನು ಸುಧಾರಿಸಿಕೊಂಡು ಮುನ್ನಡೆಯಬೇಕಿದೆ. 5 ವರ್ಷ ಪೂರೈಸಿರುವ 'ರೈತಮಿತ್ರ' ಅಂಕಣಕ್ಕೆ ಕೃಷಿ ವಿವಿ ಕುಲಪತಿ, ಅವರ ತಂಡ, ವಿಜ್ಞಾನಿಗಳು ಕೈಜೋಡಿಸಿದ್ದರಿಂದ ಯಶಸ್ವಿಯಾಗಿದೆ. ಲಕ್ಷಾಂತರ ರೈತರನ್ನು ತಲುಪುತ್ತಿರುವ ಈ ಅಂಕಣದ ಅಭಿಯಾನವನ್ನು ಮುಂದುವರಿಸಲಾಗುವುದು.
> | ಕೆ.ಎನ್. ಚನ್ನೇಗೌಡ 'ವಿಜಯವಾಣಿ' ಸಂಪಾದಕ



'ರೈತಮಿತ್ರ' ಪ್ರಶ್ನೋತ್ತರ ಅಂಕಣದ ವಾರ್ಷಿಕೋತ್ಸವದಲ್ಲಿ ರೈತರು ಪಾಲ್ಗೊಂಡಿದ್ದರು.

Viswavani pg 10

ಜಿಕೆವಿಕೆ ಆವರಣದಲ್ಲಿರುವ ಕೃಷಿಕರ ಜ್ಞಾನ ಸೌಧದ ನೂತನ ಕಟ್ಟಡ

ಕೃಷಿಕರ ಜ್ಞಾನ ಸೌಧ ಲೋಕಾರ್ಪಣೆ

ಬೆಂಗಳೂರು: ಕೃಷಿಕರಿಗೆ ಸಮಗ್ರ ಮಾಹಿತಿ, ಆಧುನಿಕ ತರಬೇತಿ ಹಾಗೂ ಕೌಶಲ್ಯಾಭಿವೃದ್ಧಿ ಒದಗಿಸುವ ಉದ್ದೇಶದಿಂದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಿರ್ಮಿಸಲಾಗಿರುವ ಕೃಷಿಕರ ಜ್ಞಾನ ಸೌಧದ ನೂತನ ಕಟ್ಟಡವನ್ನು ಕೃಷಿ ಸಚಿವ ಪಿ.ಎಂ. ನರೇಂದ್ರಸ್ವಾಮಿ ಗುರುವಾರ ಉದ್ಘಾಟಿಸಿದರು.

ಈ ಕುರಿತು ಕೃಷಿ ಸಚಿವ ಪಿ.ಎಂ. ನರೇಂದ್ರಸ್ವಾಮಿ ಮಾತನಾಡಿ, ನೂತನ ಕಟ್ಟಡದಲ್ಲಿ ಕೃಷಿಕರ ತರಬೇತಿಗಾಗಿ ಆಧುನಿಕ ಡಿಜಿಟಲ್ ಸಂವಹನ ಸಾಧನಗಳನ್ನು ಅಳವಡಿಸಲಾಗಿದ್ದು, ಗುಣಮಟ್ಟದ ತರಬೇತಿ ನೀಡಲು ಸಹಕಾರಿಯಾಗಲಿದೆ. ಕೃಷಿಕರ ಜ್ಞಾನ ಮತ್ತು ಕೌಶಲ್ಯಾಭಿವೃದ್ಧಿಗೆ ಈ ಸೌಧ ಮಹತ್ವದ ಕೇಂದ್ರವಾಗಲಿದೆ. ಜಿಕೆವಿಕೆ ಆವರಣದಲ್ಲಿ ನಿರ್ಮಿಸಿರುವ ನೂತನ ಸೌಧದಲ್ಲಿ ನಾಲ್ಕು ವಿಭಿನ್ನ ವಿನ್ಯಾಸದ ತರಬೇತಿ ಸಭಾಂಗಣಗಳು, ಕೃಷಿ ದೂರ ಶಿಕ್ಷಣ ಕೇಂದ್ರ, ಅಧ್ಯಯನ ಕೇಂದ್ರ, ಕೃಷಿ ಮಾಹಿತಿ ಘಟಕ ಹಾಗೂ ಕೃಷಿ ಸಂಘ-ಸಂಸ್ಥೆಗಳನ್ನು ಬಲಪಡಿಸುವ ಘಟಕ ಕಾರ್ಯನಿರ್ವಹಿಸಲಿವೆ ಎಂದರು.

ಕೃಷಿಕರ ಅನುಕೂಲಕ್ಕಾಗಿ ಫಾರ್ಮರ್ಸ್ ಲಾಂಜ್, ಕೆಫೆಟೇರಿಯಾ ಮತ್ತು ಗ್ರಂಥಾಲಯದಂತಹ ಸೌಲಭ್ಯಗಳನ್ನೂ ಕಲ್ಪಿಸಲಾಗಿದೆ. ಕಟ್ಟಡಕ್ಕೆ ಹೊಂದಿಕೊಂಡಿರುವ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದಲ್ಲಿ ಗುಣಮಟ್ಟದ ಬಿತ್ತನೆ ಬೀಜ, ನರ್ಸರಿ ಸಸಿಗಳು, ಜೈವಿಕ ಗೊಬ್ಬರ ಹಾಗೂ ಕೃಷಿ ಪ್ರಕಟಣೆಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಇದಲ್ಲದೆ, ಕೃಷಿ ವಿಜ್ಞಾನಗಳ ವಸ್ತು ಪ್ರದರ್ಶನಾಲಯ ಹಾಗೂ ಆಧುನಿಕ ಬೇಕರಿ ತರಬೇತಿ ಕೇಂದ್ರವೂ ಇಲ್ಲಿ ಕಾರ್ಯನಿರ್ವಹಿಸಲಿವೆ. ಕೃಷಿಗೆ ಸಂಬಂಧಿಸಿದ ಮಾಹಿತಿ, ತರಬೇತಿ ಮತ್ತು ವಿವಿಧ ಸಂಸ್ಥೆಗಳ ಸೇವೆಗಳನ್ನು ಒಂದೇ ಸೂರಿನಡಿ ಒದಗಿಸುವ ಸಮಗ್ರ ಜ್ಞಾನ ಹಾಗೂ ಕೌಶಲ್ಯ ಕೇಂದ್ರವಾಗಿ ಸೌಧ ರೂಪುಗೊಂಡಿದೆ ಎಂದರು.



ಕೃಷಿಸಚಿವ ಪಿ.ಎಂ. ನರೇಂದ್ರಸ್ವಾಮಿ ಕೃಷಿಕರ ಜ್ಞಾನ ಸೌಧವನ್ನು ಲೋಕಾರ್ಪಣೆಗೊಳಿಸಿದರು. ಈ ವೇಳೆ ಕುಲಪತಿ ಡಾ. ಎಸ್.ವಿ. ಸುರೇಶ್, ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಡಾ. ಕೆ.ಎಸ್. ರಾಜಶೇಖರಪ್ಪ, ನವೀನ್ ಎಂ.ಓ., ಕುಲಸಚಿವ ಡಾ. ಕೆ. ಮಧುಸೂದನ್ ಸೇರಿದಂತೆ ಇನ್ನಿತರರು ಇದ್ದರು.

ಒಂದೇ ಸೂರಿನಡಿ ಆಧುನಿಕ ಕೃಷಿ ಮಾಹಿತಿ

• ಬೆಂಗಳೂರು: ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನ, ತರಬೇತಿ ಹಾಗೂ ಅಗತ್ಯ ಮಾಹಿತಿಯನ್ನು ಒಂದೇ ಸೂರಿನಡಿ ಒದಗಿಸುವ ಉದ್ದೇಶದಿಂದ ಈ ಸೌಧ ನಿರ್ಮಿಸಲಾಗಿದೆ ಎಂದು ಕೃಷಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ವಿಸ್ತರಣಾ ನಿರ್ದೇಶನಾಲಯದ ರೈತರ ಜ್ಞಾನ ಸೌಧದ ನೂತನ ಕಟ್ಟಡ ಉದ್ಘಾಟಿಸಿದ ಅವರು, ರೈತರ ಜ್ಞಾನ ಮತ್ತು ಕೌಶಲಾಭಿವೃದ್ಧಿಗೆ ಇದು ಸಹಕಾರಿಯಾಗಲಿದೆ. ನೂತನ ಕಟ್ಟಡದಲ್ಲಿ ರೈತರ ತರಬೇತಿಗಾಗಿ ಆಧುನಿಕ ಡಿಜಿಟಲ್ ಸಂವಹನ ಸೌಲಭ್ಯಗಳನ್ನು ಅಳವಡಿಸಲಾಗಿದೆ ಎಂದರು.

ಕಟ್ಟಡದಲ್ಲಿ ವಿವಿಧ ವಿನ್ಯಾಸಗಳ ತರಬೇತಿ ಸಭಾಂಗಣಗಳು, ಕೃಷಿ ದೂರ ಶಿಕ್ಷಣ ಕೇಂದ್ರ ಹಾಗೂ ಇಗ್ನೋ ಸಹಯೋಗದಲ್ಲಿ ಆರಂಭಿಸಿರುವ ಅಧ್ಯಯನ ಕೇಂದ್ರ ಕಾರ್ಯನಿರ್ವಹಿಸಲಿದೆ. ಕೃಷಿ ಮಾಹಿತಿ ಘಟಕದ ಮೂಲಕ ಕೃಷಿ ಹಾಗೂ ಮಾಧ್ಯಮಗಳ ನಡುವೆ ಸಮನ್ವಯ ಸಾಧಿಸುವ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ರೈತರಿಗಾಗಿ ಫಾರ್ಮರ್ಸ್ ಲಾಂಜ್, ಕೆಫೆಟೇರಿಯಾ ಹಾಗೂ ಗ್ರಂಥಾಲಯದಂತಹ ಸೌಲಭ್ಯಗಳನ್ನು ಒದಗಿಸಲಾಗಿದೆ. ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ವಿ. ಸುರೇಶ್, ಕುಲಸಚಿವ ಡಾ. ಕೆ. ಮಧುಸೂದನ್, ಕೃಷಿ ಡೀನ್ ಡಾ. ವೈ.ಎನ್. ಶಿವಲಿಂಗಯ್ಯ, ವಿಸ್ತರಣಾ ನಿರ್ದೇಶಕ ಡಾ. ಕೆ.ಪಿ. ರಘುಪ್ರಸಾದ್, ಸಂಶೋಧನಾ ನಿರ್ದೇಶಕ ಡಾ. ಮೂಡಲಗಿರಿಯಪ್ಪ ಸೇರಿದಂತೆ ಅಧಿಕಾರಿಗಳು, ಬೋಧಕ-ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



Hosadiganta pg 12

ಕೃಷಿಕರ ಜ್ಞಾನ ಸೌಧ ಲೋಕಾರ್ಪಣೆ

ಅನ್ನದಾತರ ತರಬೇತಿಗೆ ಡಿಜಿಟಲ್ ಸಂವಹನ ಸಾಧನಗಳ ಅಳವಡಿಕೆ

ಸಂ.ಕ.ಸಮಾಚಾರ, ಬೆಂಗಳೂರು

ರೈತರಿಗೆ ಒಂದೇ ಸೂರಿನಡಿ ಆಧುನಿಕ ಕೃಷಿ ತಂತ್ರಜ್ಞಾನ ಹಾಗೂ ವೈಜ್ಞಾನಿಕ ಮಾಹಿತಿಯೊಂದಿಗೆ ಗುಣಮಟ್ಟದ ತರಬೇತಿ ಒದಗಿಸುವ ಉದ್ದೇಶದಿಂದ ಬೆಂ.ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಕೃಷಿಕರ ಜ್ಞಾನ ಸೌಧ ನಿರ್ಮಿಸಲಾಗಿದೆ ಎಂದು ಕೃಷಿ ಸಚಿವ ಪಿ.ಎಂ. ನರೇಂದ್ರಸ್ವಾಮಿ ತಿಳಿಸಿದರು.

ಗುರುವಾರ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ರೈತರ ಜ್ಞಾನ ಮತ್ತು ಕೌಶಲ್ಯಾಭಿವೃದ್ಧಿಗೆ ಈ ಸೌಧ ಪ್ರಮುಖ ಕೇಂದ್ರವಾಗಲಿದ್ದು ಕೃಷಿಕರ ತರಬೇತಿಗಾಗಿ ಆಧುನಿಕ ಡಿಜಿಟಲ್ ಸಂವಹನ ಸಾಧನಗಳನ್ನು ಅಳವಡಿಸಲಾಗಿದೆ ಎಂದರು.

ಜಿಕೆವಿಕೆ ಹಸಿರು ಆವರಣದಲ್ಲಿ ನಿರ್ಮಿಸಲಾಗಿರುವ ಕಟ್ಟಡದಲ್ಲಿ ವಿವಿಧ ವಿನ್ಯಾಸಗಳ ನಾಲ್ಕು ತರಬೇತಿ ಸಭಾಂಗಣಗಳು ಇದ್ದು, ರೈತರಿಗೆ ನಿರಂತರ ತರಬೇತಿ ನೀಡಲು ಅಗತ್ಯವಿರುವ ಆಧುನಿಕ ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದೆ. ಕೃಷಿ ದೂರಶಿಕ್ಷಣ ಕೇಂದ್ರ ಹಾಗೂ ಇಗ್ನೊ ಸಹಯೋಗದಲ್ಲಿ ಆರಂಭಿಸಿರುವ ಅಧ್ಯಯನ ಕೇಂದ್ರವೂ ಇಲ್ಲಿ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು.

ಕೃಷಿ ಮತ್ತು ಮಾಧ್ಯಮಗಳ ನಡುವೆ ಸಮನ್ವಯ ಸಾಧಿಸುವ



ಕೃಷಿ ಮಾಹಿತಿ ಘಟಕ ಕಟ್ಟಡದ ಪ್ರಮುಖ ಭಾಗವಾಗಿದೆ. ಕೃಷಿ ಸಂಘ-ಸಂಸ್ಥೆಗಳನ್ನು ಬಲಪಡಿಸುವ ಸಮೇತಿ ಘಟಕವೂ ಇಲ್ಲಿ ಕಾರ್ಯನಿರ್ವಹಿಸಲಿದೆ. ರೈತರ ಅನುಕೂಲಕ್ಕಾಗಿ ಫಾರ್ಮರ್ಸ್ ಲಾಂಜ್, ಕೆಫೆಟೇರಿಯಾ ಹಾಗೂ ಗ್ರಂಥಾಲಯದ ವ್ಯವಸ್ಥೆಯನ್ನೂ ಮಾಡಲಾಗಿದೆ ಎಂದರು.

ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ವಿ. ಸುರೇಶ್, ವ್ಯವಸ್ಥಾಪನಾ ಮಂಡಳಿ ಸದಸ್ಯ ನವೀನ್ ಎಂ.ಎನ್., ಕುಲಸಚಿವ ಡಾ. ಕೆ. ಮಧುಸೂದನ್, ಕೃಷಿ ಡೀನ್ ಡಾ. ವೈ.ಎನ್. ಶಿವಲಿಂಗಯ್ಯ, ವಿಸ್ತರಣಾ ನಿರ್ದೇಶಕ ಡಾ. ಕೆ.ಪಿ. ರಘುಪ್ರಸಾದ್, ಸಂಶೋಧನಾ ನಿರ್ದೇಶಕ ಡಾ. ಮುಡಲಗಿರಿಯಪ್ಪ ಮತ್ತಿತರರಿದ್ದರು.

S-karnataka pg 05

V-karnataka pg 05

ಅಂಗಾಂಶ ಬಾಳೆ ಸಸಿಗಳಿಗೆ ಕುಸಿದ ಬೇಡಿಕೆ

ಬರಗಾಲ ಪರಿಣಾಮ ನೀರಿನ ಕೊರತೆ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesofindia.com

ರಾಜ್ಯದಲ್ಲಿ ಬರಗಾಲದಿಂದಾಗಿ ಅಂಗಾಂಶ ಕೃಷಿಯಿಂದ ಅಭಿವೃದ್ಧಿಪಡಿಸಿದ ಬಾಳೆ ಸಸಿಗಳಿಗೆ ಶೇ.50ರಷ್ಟು ಬೇಡಿಕೆ ಕುಂಠಿತವಾಗಿದೆ.

ತೋಟಗಾರಿಕೆ ಇಲಾಖೆಯ ಬೆಂಗಳೂರಿನ ಹುಳಿಮಾವು ಜೈವಿಕ ತಂತ್ರಜ್ಞಾನ ಕೇಂದ್ರದಲ್ಲಿ ವಾರ್ಷಿಕ ಸುಮಾರು 14-15 ಲಕ್ಷಕ್ಕೂ ಅಧಿಕ ಸಸಿಗಳನ್ನು ಅಭಿವೃದ್ಧಿಪಡಿಸಿ ನೀಡಲಾಗುತ್ತಿದ್ದುದು ಈ ವರ್ಷ 8 ಲಕ್ಷಕ್ಕೆ ಇಳಿಕೆಯಾಗಿದೆ. ಅಷ್ಟೆ ಅಲ್ಲ, ಬೆಂಗಳೂರಿನ ಜೈವಿಕ ಕೇಂದ್ರದ ಮಾದರಿಯಲ್ಲೇ ಬೆಳಗಾವಿ, ಶಿವಮೊಗ್ಗ, ಬೀದರ್, ಮೈಸೂರು ಹಾಗೂ ದಾವಣಗೆರೆಗಳಲ್ಲೂ ಜೈವಿಕ ಕೇಂದ್ರಗಳನ್ನು ತೆರೆಯಲಾಗಿದೆ. ಆದರೆ, ಬೆಂಗಳೂರು ಹೊರತುಪಡಿಸಿದರೆ, ಶಿವಮೊಗ್ಗ ಮತ್ತು ಮೈಸೂರಿನಲ್ಲಿ ಅಲ್ಪ ಪ್ರಮಾಣದಲ್ಲಿ ಸಸಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಉಳಿದ ಕೇಂದ್ರಗಳಲ್ಲಿ ಅಲ್ಲಿನ ವಾತಾವರಣ ಹಾಗೂ ನಾನಾ ಕಾರಣಗಳಿಂದ ಸಸಿಗಳನ್ನು ಅಭಿವೃದ್ಧಿಪಡಿಸುವುದು ಕಷ್ಟಸಾಧ್ಯವಾಗುತ್ತಿದೆ. ಆದರೆ, ಅತಿ ಹೆಚ್ಚು ಸಸಿಗಳನ್ನು ಅಭಿವೃದ್ಧಿಪಡಿಸುತ್ತಿರುವುದು ಬೆಂಗಳೂರು ಕೇಂದ್ರದಲ್ಲಿ. ಈ ಬಾರಿ ಇಲ್ಲಿಯೂ ಕಡಿಮೆಯಾಗಿದೆ.

ಸಾಮಾನ್ಯವಾಗಿ ಬಾಳೆ ಬೆಳೆಗೆ ಹೆಚ್ಚು ನೀರಿನ ಅಗತ್ಯವಿರುತ್ತದೆ. ಆದರೆ, ಈ ವರ್ಷ ಮುಂಗಾರು ಮಳೆ ವಾಡಿಕೆಯಂತೆ ಬರಲಿಲ್ಲ. ಅದರಲ್ಲೂ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮೈಸೂರು, ಮಂಡ್ಯ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಮಳೆ ಪ್ರಮಾಣ ಕಡಿಮೆಯಾಗಿರುವುದರಿಂದ ಕೆರೆ, ಕಟ್ಟೆಗಳಲ್ಲಿ ನೀರಿಲ್ಲ. ಕೊಳವೆಬಾವಿಗಳಲ್ಲಿ ಕೂಡ ನೀರು ಕಡಿಮೆಯಾಗಿದೆ. ಹೀಗಾಗಿ, ಬಾಳೆ ಬೆಳೆಗಾರರು ಅನ್ಯ ಬೆಳೆಗಳತ್ತ ಒಲವು ತೋರಿದ್ದಾರೆ. ಇದರಿಂದಾಗಿ ಅಂಗಾಂಶ ಕೃಷಿಯಿಂದ ಅಭಿವೃದ್ಧಿಪಡಿಸಿದ ಬಾಳೆ ಸಸಿಗಳಿಗೆ ಬೇಡಿಕೆ ಕುಸಿದಿದೆ.

ಹುಳಿಮಾವು ಜೈವಿಕ ತಂತ್ರಜ್ಞಾನ ಕೇಂದ್ರದಲ್ಲಿರುವ ಅಂಗಾಂಶ ಕೃಷಿ ಪ್ರಯೋಗಾಲಯವು ಸರಕಾರಿ ವಲಯದ ಏಕೈಕ ಕೇಂದ್ರವಾಗಿದೆ. ನ್ಯಾಷನಲ್ ಹಾರ್ಟಿಕಲ್ಚರ್ ಮಿಷನ್ (ಎನ್ಎಚ್ಎಂ) ಹಾಗೂ ಇತರ ಯೋಜನೆಗಳಡಿ ಬಾಳೆ ಬೆಳೆಗಾರರಿಗೆ ಸಬ್ಸಿಡಿ ನೀಡಲಾಗುತ್ತಿದೆ. ಆದರೆ, ಈ ವರ್ಷ ನೀರಿನ ಕೊರತೆಯಿರುವುದರಿಂದ ರೈತರು ಹೆಚ್ಚಿನ ಆಸಕ್ತಿ ತೋರುತ್ತಿಲ್ಲ.

ಬಾಳೆಯಿಂದ ಭೂಮಿಯ ಫಲವತ್ತತೆ ಹೆಚ್ಚಳ: ಬಾಳೆಯನ್ನು ವಾಣಿಜ್ಯ ಬೆಳೆಯನ್ನಾಗಿ ಮಾತ್ರವಲ್ಲದೆ ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವ ಗೊಬ್ಬರ ತಯಾರಿಗಾಗಿಯೂ ಇದನ್ನು ಬೆಳೆಸುವುದು ಬಹಳ ಸೂಕ್ಷ್ಮವಾಗಿದೆ. ಅದರಲ್ಲೂ, ಅಡಕೆ, ತೆಂಗು ಮತ್ತಿತರ ಬೆಳೆಗಳಿಗೆ ಪೊಟ್ಯಾಷಿಯಂನ ಅಗತ್ಯತೆ ಹೆಚ್ಚಾಗಿದ್ದು, ಬಾಳೆಯನ್ನು ಅಂತರ ಬೆಳೆಯಾಗಿ ಬೆಳೆಯುವುದರಿಂದ ಬೆಳೆಗಳಿಗೆ ಪೊಟ್ಯಾಷಿಯಂ ಹಾಗೂ ಇತರೆ ಪೂರಕ ಪೋಷಕಾಂಶಗಳನ್ನು ಪೂರೈಸುತ್ತದೆ. ಅಲ್ಲದೆ, ನೀರಾವರಿ ವ್ಯವಸ್ಥೆಯುಳ್ಳವರು ಈಗ ಬಾಳೆ ಬೆಳೆದರೆ ಹೆಚ್ಚುಲಾಭವನ್ನೂ ಕಾಣಬಹುದು ಎನ್ನುತ್ತಾರೆ ಹುಳಿಮಾವು ಬಯೋಟೆಕ್ನಾಲಜಿ ಕೇಂದ್ರದ ಅಧಿಕಾರಿ ಸಹನಾ ಹೆಗಡೆ.

ಅನ್ಯ ಬೆಳೆಗಳತ್ತ ರೈತರ ಒಲವು



ಸಸಿಗಳ ವೈಶಿಷ್ಟ್ಯ

ಹುಳಿಮಾವು ಪ್ರಯೋಗಾಲಯದಲ್ಲಿ ಉತ್ತಮ ಗುಣಮಟ್ಟದ ಜಿ 9 (ಪಚ್ಚಬಾಳೆ) ಮತ್ತಿತರ ತಳಿಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಅಂಗಾಂಶ ಕೃಷಿಯಿಂದ ಅಭಿವೃದ್ಧಿಪಡಿಸಿದ ಸಸಿಗಳಲ್ಲಿ ರೋಗ ಹಾಗೂ ಕೀಟಬಾಧೆ ನಿರೋಧಕ ಶಕ್ತಿ ಇರುತ್ತದೆ. ಜತೆಗೆ, ಅಧಿಕ ಇಳುವರಿಯನ್ನೂ ನೀಡುತ್ತವೆ. ನೆಟ್ಟ ಎಲ್ಲ ಸಸಿಗಳು ಏಕಕಾಲದಲ್ಲಿ ಹೂ/ಹಣ್ಣು ಬಿಡುವುದು ಈ ತಳಿಯ ವಿಶೇಷ. ಅದರಲ್ಲೂ, ಕೆಲವು ತಳಿಗಳ ಪ್ರತಿ ಗಿಡದಲ್ಲಿ ಸುಮಾರು 45 ಕೆ.ಜಿ.ವರೆಗೆ ಹಣ್ಣಿನ ಇಳುವರಿ ಬರುತ್ತದೆ. ಹೀಗಾಗಿ, ಬೇಡಿಕೆ ಹೆಚ್ಚಾಗಿದೆ.

ಈ ವರ್ಷ ರಾಜ್ಯಾದ್ಯಂತ ಬರಗಾಲ ಇರುವುದರಿಂದ ಬಾಳೆ ಸಸಿಗಳಿಗೆ



ಬೇಡಿಕೆ ಕುಸಿದಿದೆ. ನಮ್ಮ ಜೈವಿಕ ಕೇಂದ್ರದಲ್ಲಿ ಬಾಳೆ ಸಸಿಗಳ ಜತೆಗೆ ಅಂಥೋರಿಯಂ, ಆರ್ಕಿಡ್, ಕ್ಯಾಲಾಲಿಲ್ಲಿ ಸಸಿಗಳನ್ನೊಳಗೊಂಡಂತೆ ನಾನಾ ಬಗೆಯ ಅಲಂಕಾರಿಕ ಸಸಿಗಳನ್ನು ಕೂಡ ಅಭಿವೃದ್ಧಿಪಡಿಸುವುದರಿಂದ ಇವುಗಳಿಗೆ ಹೆಚ್ಚು ಬೇಡಿಕೆಯಿದೆ.

-ಹೇಮಾ ಜಂಟಿ ನಿರ್ದೇಶಕರು, ಹುಳಿಮಾವು ಜೈವಿಕ ಕೇಂದ್ರ, ತೋಟಗಾರಿಕೆ ಇಲಾಖೆ

ಬಾಳೆ ಸಸಿಗೆ 12 ರೂ. ದರ

ಅಂದ ಹಾಗೆ ಹುಳಿಮಾವು ಜೈವಿಕ ತಂತ್ರಜ್ಞಾನ ಕೇಂದ್ರದಲ್ಲಿ ಉತ್ಪಾದನಾ ವೆಚ್ಚ ಹಾಗೂ ಬೇಡಿಕೆಗೆ ಅನುಗುಣವಾಗಿ ಬಾಳೆ ಸಸಿಗಳಿಗೆ ದರ ನಿಗದಿಪಡಿಸಲಾಗುತ್ತದೆ. 11 ರೂ. ಇದ್ದ ಬೆಲೆಯನ್ನು ಕಳೆದ ವರ್ಷ 12 ರೂ.ಗೆ ಏರಿಕೆ ಮಾಡಲಾಗಿದೆ.

ಉಳುಮೆ ಸಿಕ್ಕರೆ ಸಾಲದು, ನೀರೂ ಬೇಕು: ಪಾಳುಬಿದ್ದ ಭೂಮಿಗೆ ಮರುಜೀವ ನೀಡಲಿ ಯೋಜನೆ

ರೈತರ ಕಣ್ಣೀರು ಒರೆಸಲಿ ಮುಖ್ಯಮಂತ್ರಿ ನೇಗಿಲ ಯೋಗಿ

ಸರಕಾರ ಸಣ್ಣ ರೈತರ ಭೂಮಿಯನ್ನು ಉಳುಮೆ ಮಾಡಿ ಕೊಟ್ಟ ತಕ್ಷಣ ಎಲ್ಲ ಸಮಸ್ಯೆಗಳು ಮಾಯವಾಗುವುದಿಲ್ಲ. ಕರ್ನಾಟಕದಲ್ಲಿ ಬಹುತೇಕ ಕೃಷಿ ಮಳೆಯಾಧಾರಿತವಾಗಿದ್ದು ಮಳೆಯ ಅನಿಶ್ಚಿತತೆ ರೈತರ ಬದುಕನ್ನು ಅತಂತ್ರಗೊಳಿಸಿದೆ. ಬರ, ಅತಿವೃಷ್ಟಿ ಕಾಡುಪ್ರಾಣಿಗಳ ಹಾವಳಿ ಹಾಗೂ ಬೆಳೆ ರೋಗಗಳಿಂದ ಬೇಸತ್ತ ರೈತರು, ಕೃಷಿ ಮಾಡುವುದಕ್ಕಿಂತ ಕೂಲಿ ಮಾಡುವುದೇ ಮೇಲು ಎಂಬ ಸ್ಥಿತಿಗೆ ತಲುಪಿದ್ದಾರೆ. ಈ ಎಲ್ಲಾ ಸವಾಲುಗಳಿಗೆ ಉತ್ತರ ಕಂಡುಕೊಂಡರೆ ಮಾತ್ರ ಸರಕಾರದ ಉಳುಮೆ ಭಾಗ್ಯ ಸಾರ್ಥಕವಾಗುತ್ತದೆ.

■ ಆರಗ ರವಿ ಶಿವಮೊಗ್ಗ
ravi.puttappa@timesofindia.com

ಆದು 2026ರ ಮುಂಗಾರು ಹಂಗಾಮು. ರಾಣೆಬೆನ್ನೂರು ತಾಲೂಕಿನ ವೆಂಕಟಾಪುರ ತಾಂಡಾದ ಶಂಕರಪ್ಪ ಲಮಾಣಿ ಬಳಿ ಎತ್ತು ಗಳಾಗಲಿ, ಟ್ಯಾಕ್ಟರ್ ಆಗಲಿ ಇರಲಿಲ್ಲ. ತನ್ನಲ್ಲಿದ್ದ 3.16 ಎಕರೆ ಜಮೀನಿನಲ್ಲಿ ಕಳೆ ತೆಗೆಯಲು ತನ್ನಿಬ್ಬರು ಮಕ್ಕಳಿಂದಲೇ ಎಡೆಕುಂಟೆ ಎಳೆಸಿದ ದೃಶ್ಯ, ಬಡ ರೈತರ ಸಂಕಷ್ಟದ ದಾರುಣ ಸ್ಥಿತಿಯನ್ನು ಜಗಜ್ಜಾಹೀರುಗೊಳಿಸಿತು. ಸಣ್ಣ ರೈತರು ಎದುರಿಸುತ್ತಿರುವ ಯಾಂತ್ರೀಕರಣದ ಕೊರತೆ ಮತ್ತು ಗಗನಕ್ಕೇರುತ್ತಿರುವ ಕೃಷಿ ವೆಚ್ಚದ ಸಂಕಷ್ಟಕ್ಕೆ ಇದು ನಿಜಕ್ಕೂ ಕನ್ನಡಿಯಾಗಿತ್ತು.

ಕೇಂದ್ರ ಕೃಷಿ ಸಚಿವಾಲಯದ 2023-24ರ ಅಧಿಕೃತ ಭೂ ಬಳಕೆ ಅಂಕಿಅಂಶಗಳ ಪ್ರಕಾರ, ಕರ್ನಾಟಕದಲ್ಲಿ ಸುಮಾರು 16 ಲಕ್ಷ ಹೆಕ್ಟೇರ್ ಕೃಷಿ ಯೋಗ್ಯ ಭೂಮಿ ಬಿತ್ತನೆಯಾಗದೆ ಪಾಳುಬಿದ್ದಿತ್ತು. 2026ರಲ್ಲಿ ಇದು 11.2 ಲಕ್ಷ ಹೆಕ್ಟರ್‌ಗೆ ಇಳಿಕೆಯಾಗಿದ್ದರೂ, ಒಂದು ವರ್ಷಕ್ಕಿಂತ ಹೆಚ್ಚು ಕಾಲ ಬಳಕೆಯಾಗದೆ ಪಾಳುಬಿದ್ದಿರುವ ಕೃಷಿಭೂಮಿ ಬರೋಬ್ಬರಿ 4.8 ಲಕ್ಷ ಹೆಕ್ಟೇರ್‌ನಷ್ಟಿದೆ. 3 ಎಕರೆಗಿಂತ ಕಡಿಮೆ ವಿಸ್ತೀರ್ಣದ ಕೃಷಿ ಭೂಮಿಯೇ ಹೆಚ್ಚಿನ ಪ್ರಮಾಣದಲ್ಲಿ ಪಾಳುಬಿಳುತ್ತಿದ್ದು, ಇದಕ್ಕೆ ಸಣ್ಣ ರೈತರ ಆರ್ಥಿಕ ಅಸಹಾಯಕತೆಯೇ ಪ್ರಮುಖ ಕಾರಣ. ಈ ಹಿನ್ನೆಲೆಯಲ್ಲಿ 'ಮುಖ್ಯಮಂತ್ರಿ ನೇಗಿಲ ಯೋಗಿ' ಯೋಜನೆ ಇಂತಹ ಸಂಕಷ್ಟದ ರೈತರ ಪಾಲಿಗೆ ಸಂಜೀವಿನಿಯಾಗಬಲ್ಲದು.

ಯೋಜನೆಯ ಲಾಭಗಳೇನು?

ಮಲೆನಾಡು, ಅರೆಮಲೆನಾಡು, ಕರಾವಳಿ ಹಾಗೂ ಬಯಲುಸೀಮೆ ಹೀಗೆ ವಿಭಿನ್ನ ವಾತಾವರಣ ಹೊಂದಿರುವ ಕರ್ನಾಟಕದಲ್ಲಿ ಕೃಷಿಯೂ ಅಷ್ಟೆ ವೈವಿಧ್ಯತೆಯಿಂದ ಕೂಡಿದೆ. 'ಮುಖ್ಯಮಂತ್ರಿ ನೇಗಿಲ ಯೋಗಿ' ಯೋಜನೆಯು ಸಣ್ಣ ರೈತರ ಉಳುಮೆಯ ಆರಂಭಕ ವೆಚ್ಚವನ್ನು ಗಣನೀಯವಾಗಿ ತಗ್ಗಿಸಲಿದೆ. ಟ್ರ್ಯಾಕ್ಟರ್ ಬಾಡಿಗೆ, ಡೀಸೆಲ್ ಹಾಗೂ ಕಾರ್ಮಿಕರ ವೆಚ್ಚ ಭರಿಸಲಾಗದ ರೈತರಿಗೆ ಇದು ಶಕ್ತಿಯಾದ ಆಸರೆಯಾಗಲಿದ್ದು ಮಳೆ ಬರುವ ಸರಿಯಾದ ಸಮಯಕ್ಕೆ ಭೂಮಿ ಹದಗೊಳಿಸಲು ಅನುವು ಮಾಡಿಕೊಡುತ್ತದೆ. ಲಾಭಕ್ಕಿಂತ ವೆಚ್ಚವೇ ಹೆಚ್ಚಿರುವ ಕಾರಣಕ್ಕೆ ಭತ್ತ, ರಾಗಿ, ಸಿರಿಧಾನ್ಯ ಬೆಳೆಯಲು ಹಿಂಜರಿಯುವ ರೈತರಿಗೆ ಸರಕಾರವೇ ಭೂಮಿ ಉಳುಮೆ ಮಾಡಿಕೊಟ್ಟರೆ, ಇದು ಆಹಾರ ಧಾನ್ಯಗಳ ಉತ್ಪಾದನೆಗೂ ದೊಡ್ಡ ಪ್ರೋತ್ಸಾಹವಾಗಲಿದೆ.

ನೀರಾವರಿಗೂ ಆದ್ಯತೆ ಇರಲಿ

ಸರಕಾರ ಸಣ್ಣ ರೈತರ ಭೂಮಿಯನ್ನು ಉಳುಮೆ ಮಾಡಿ ಕೊಟ್ಟ ಕ್ಷಣ ಸಮಸ್ಯೆಗಳೆಲ್ಲವೂ ಪರಿಹಾರ ಆಗುತ್ತವೆ ಎಂದರೆನಿಲ್ಲ. ಕರ್ನಾಟಕದಲ್ಲಿ ಬಹುತೇಕ ಮಳೆಯಾಧಾರಿತ ಕೃಷಿ ಮಾಡುತ್ತಿದ್ದು, ಮಳೆಯ ಅನಿಶ್ಚಿತತೆ ರೈತರ ಬದುಕನ್ನೇ ಅತಂತ್ರವಾಗಿಸಿದೆ. ಬರ, ಅತಿವೃಷ್ಟಿ, ಕಾಡುಪ್ರಾಣಿಗಳ ಹಾವಳಿ, ಬೆಳೆಗಳಿಗೆ ತಗುಲುವ ವಿಚಿತ್ರ ರೋಗ ರುಜಿನಗಳು ಬೆಳೆ ಬೆಳೆಯುವುದಕ್ಕಿಂತ ಕೂಲಿ ಮಾಡಿಕೊಂಡು ಸುಮ್ಮನಿರುವುದೇ ಲೇಸು ಎಂಬಂತೆ ಮಾಡಿವೆ. ಉಚಿತ ಮಣ್ಣು ಪರೀಕ್ಷೆ, ಯಾವ ಮಣ್ಣಿನಲ್ಲಿ ಯಾವ ಬೆಳೆಗಳನ್ನು ಬೆಳೆಯಬೇಕು ಎಂಬುದನ್ನು ಕಡ್ಡಾಯ ಮಾಡುವುದು, ಬಿತ್ತನೆ ವಿಫಲವಾದರೆ ಸೂಕ್ತ ಪರಿಹಾರ, ಬರಪೀಡಿತ ತಾಲೂಕುಗಳಲ್ಲಿ ಸಿರಿಧಾನ್ಯ, ಕೊಗರಿ, ಹೆಸರು, ಕಡಲೆ ಮತ್ತಿತರ ಕಡಿಮೆ ನೀರಿನ ಬೆಳೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು, ಕೃಷಿಗೆ ಆಗ್ಯ ನೀರಾವರಿ ಸೌಲಭ್ಯ ಕಲ್ಪಿಸುವುದು ಮತ್ತು ರೈತರು ಬೆಳೆದ ಬೆಳೆಗೆ ಲಾಭದಾಯಕ ದರ ಸಿಗುವಂತೆ ಯೋಜನೆ ರೂಪಿಸಿದರೆ ಮಾತ್ರ ರೈತರ ಕೃಷಿ ಭೂಮಿಯಲ್ಲಿ ಸರಕಾರ ಉಳುಮೆ ಮಾಡಿಕೊಟ್ಟದ್ದು ಸಾರ್ಥಕವಾಗುತ್ತದೆ.

ನೀರು ಕೊಟ್ಟು ಉಳುಮೆ ಮಾಡಿ!

ರೈತರು ಕೃಷಿ ಜಮೀನು ಹಾಳುಬಡಲು ಪ್ರಮುಖ ಕಾರಣ ನೀರಿನ ಕೊರತೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ರೈತರ ಬಳಿ ಹತ್ತಾರು ಎಕರೆ ಜಮೀನಿದ್ದರೂ ನೀರಿನ ಕೊರತೆಯಿಂದ ಕೃಷಿಗೆ ತೀವ್ರ ಹಿನ್ನಡೆಯಾಗಿದೆ. ಇಂತಹ ಕೃಷಿ ಭೂಮಿಯನ್ನು ಸರಕಾರ ಉಳುಮೆ ಮಾಡಿಕೊಟ್ಟರೂ ಪ್ರಯೋಜನ ಏನು? ಮಳೆಯ ವಿಳಂಬ, ಕಡಿಮೆ ಮಳೆ, ಆಕಾಲಿಕ ಮಳೆ, ಅಂತರ್ಜಲ ಕುಸಿತ, ಕೆರೆ, ಕಾಲುವೆಗಳಲ್ಲಿ ನೀರಿಲ್ಲದಿರುವುದು ಕೃಷಿಯನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ತುಮಕೂರು ಕೇಂದ್ರ ಜೀವಲಯದ ಅಧ್ಯಯನದಲ್ಲಿ ರೈತರು ಜಮೀನು ಪಾಳುಬಡಲು ಮಳೆ ಮತ್ತು ನೀರಾವರಿ ಕೊರತೆಯೇ ಮುಖ್ಯ ಕಾರಣ ಎಂದು ಹೇಳಲಾಗಿದೆ. ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ, ಡೀಸೆಲ್, ವಿದ್ಯುತ್, ಕೂಲಿ, ಯಂತ್ರೋಪಕರಣಗಳ ಬಾಡಿಗೆ ಮೆಚ್ಚ ಮುಗಿಲೆತ್ತರಕ್ಕೆ ಚಿಮ್ಮುತ್ತಿದ್ದರೆ ಇತ್ತ ಕೃಷಿಗೆ ಬೇಕಾದ ನೀರು ಪಾತಾಳ ಕಾಣುತ್ತಿದೆ. ಎಲ್ಲ ಸವಾಲುಗಳನ್ನು ಎದುರಿಸಿ ಬೆಳೆಯನ್ನು ಮಾರುಕಟ್ಟೆಗೆ ತಂದರೆ ಉತ್ತಮ ಧಾರಣೆಯೂ ಸಿಗದ ಎಷ್ಟೋ ಬಾರಿ ರಸ್ತೆ ಬದಿ ಸುರಿದು ಹೋಗುವ ಸ್ಥಿತಿ ರೈತರದ್ದು. ಸರಕಾರ ಇಂತಹ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿದರೆ ಮಾತ್ರ 'ಮುಖ್ಯಮಂತ್ರಿ ನೇಗಿಲ ಯೋಗಿ' ಯೋಜನೆಗೆ ಅರ್ಥ ಬರುತ್ತದೆ. 'ನೇಗಿಲ ಅನಿಶ್ಚಿತತೆ-ಬೆಳೆ ವಿಫಲವಾಗುವ ಭಯ-ಹೆಚ್ಚುತ್ತಿರುವ ಕೃಷಿ ಮೆಚ್ಚ-ಕಾರ್ಮಿಕರು, ಯಂತ್ರಗಳ ಕೊರತೆ-ಕಡಿಮೆ ಲಾಭ' ಇದಕ್ಕೆ ಪರಿಹಾರ ಕಂಡುಕೊಂಡರೆ ನೇಗಿಲ ಯೋಗಿ ರಾಜಕೀಯ ಲಾಭದ ಘೋಷಣೆಯಾಗದೆ ನಿಜವಾಗಿಯೂ ಪಾಳುಬದ್ದ ಜಮೀನನ್ನು ಕೃಷಿಗೆ ಮರಳಿಸುವ ಯಶಸ್ವಿ ಯೋಜನೆಯಾಗುತ್ತದೆ.



ಚಿಕ ಪೋಕಸ್

ಯಾವ ಪ್ರಾಂತ್ಯದ ರೈತರಿಗೆ ಎಷ್ಟು ಅನುಕೂಲ?

ಮಧ್ಯ ಕರ್ನಾಟಕ, ಬಯಲುಸೀಮೆ

ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ, ರಾಮನಗರ, ಹಾಸನ ಹಾಗೂ ಮೈಸೂರು ಭಾಗಗಳಲ್ಲಿ 1 ರಿಂದ 3 ಎಕರೆ ಒಳಗಿನ ಸಣ್ಣ ಹಿಡುವಳಿದಾರರೇ ಬಹುಸಂಖ್ಯಾತರಾಗಿದ್ದಾರೆ. ಇಲ್ಲಿನ ರೈತರು ಹೆಚ್ಚಾಗಿ ಮಳೆಯಾಶ್ರಿತವಾಗಿ ರಾಗಿ, ಮುಸುಕಿನ ಜೋಳ ಹಾಗೂ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಮೇಲಿನ ಮಳೆ ಬಿದ್ದ ತಕ್ಷಣವೇ ಅವಸರದಲ್ಲಿ ಉಳುಮೆ ಮಾಡಬೇಕಾದ ಅನಿವಾರ್ಯತೆ ಇರುವುದರಿಂದ, ಬಾಡಿಗೆ ಟ್ರಾ.ಕ್ಟರ್‌ಗೆ ಕಾಯುವ ಅಥವಾ ದುಬಾರಿ ವೆಚ್ಚ ಭರಿಸುವ ಸಂಕಷ್ಟ ಈ ಯೋಜನೆಯಿಂದ ತಪ್ಪಲಿದೆ. ವಿಶೇಷವಾಗಿ ದಕ್ಷಿಣ ಕರ್ನಾಟಕದ ಸಣ್ಣ ರೈತರಿಗೆ ಈ ಯೋಜನೆ ಅಕ್ಷರಶಃ ವರದಾನವಾಗಲಿದೆ.

ಉತ್ತರ, ಕಲ್ಯಾಣ ಕರ್ನಾಟಕ

ಕಲಬುರಗಿ, ಬೆಳಗಾವಿ, ರಾಯಚೂರು, ವಿಜಯಪುರ, ಬಾಗಲಕೋಟೆ, ಕೊಪ್ಪಳ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಒಣಭೂಮಿ ಬೇಸಾಯ ದೊಡ್ಡ ಪ್ರಮಾಣದಲ್ಲಿದೆ. ತೀವ್ರ ಆರ್ಥಿಕ ಸಂಕಷ್ಟದಿಂದಾಗಿ ಎತ್ತುಗಳನ್ನು ಮಾರಿಕೊಂಡಿರುವ ಲಕ್ಷಾಂತರ ಕುಟುಂಬಗಳಿಗೆ ಈ ಯೋಜನೆ ಬಿತ್ತನೆಗೆ ಮೊದಲೇ ದೊಡ್ಡ ಆರ್ಥಿಕ ನೆರವು ನೀಡಬಲ್ಲದು. ಆದರೆ, ಈ ಭಾಗದಲ್ಲಿ 3 ಎಕರೆಗಿಂತ ಹೆಚ್ಚು ಜಮೀನಿರುವ ರೈತರ ಸಂಖ್ಯೆಯೂ ಗಣನೀಯವಾಗಿದ್ದು, ಮಿತಿ ಹೇರಲಾಗಿರುವ ಈ ಯೋಜನೆಯ ಲಾಭ ಈ ಭಾಗದ ಜನರಿಗೆ ಎಷ್ಟರ